## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಪ್ರೌಢ ಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** 1 ಆಯುಕರು, ಸಾರ್ವಜನಿಕ ಶಿಕಣ ಇಲಾಖೆ ಇವರ ಪತ್ರ ಸಂಖೆ:ಸಿ1(6)ಸ್ವ.ಚಾ.ಬಡ-143/2005-06 ದಿನಾಂಕ:05-01-2007 ಮತ್ತು 24-01-2008

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ, 9 ಜನ ಅಧಿಕಾರಿಗಳು 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿಗೆ ಅರ್ಹರಿರುವ ದಿನಾಂಕಕ್ಕೆ ಮುಂಚೆಯೇ ಬಡ್ತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದು ಇವರುಗಳ ಪೈಕಿ ಕೆಲವು ಅಧಿಕಾರಿಗಳು ಉಪ ನಿರ್ದೇಶಕರ ವೃಂದಕ್ಕೂ ಬಡ್ತಿ ಹೊಂದಿದವರಾಗಿರುತ್ತಾರೆ. ಹಾಗೆಯೇ ಇವರು ಬಡ್ತಿ ಹುದ್ದೆಯ ವೇತನವನ್ನು ಪಡೆಯುತ್ತಿದ್ದು, ಸದರಿ ಅಧಿಕಾರಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ :ಎಫ್‌ಡಿ :25ಎಸ್‌ಆರ್‌ಪಿ91 ದಿನಾಂಕ :01-02-93 ರಲ್ಲಿ ಅವಕಾಶವಿರುವಂತೆ ತಮಗೆ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿ ದೊರೆಯುವರೆಗೂ ಹಳೆಯ ವೇತನ ಶ್ರೇಣಿಯಲ್ಲಿ ಮುಂದುವರೆಯುವುದಾಗಿ ತಮಗೆ ಈ ಸೌಲಭ್ಯ ಕಲ್ಪಿಸಿ ಕೊಡಲು ಕೋರಿರುತ್ತಾರೆಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು, ಇವರು ತಿಳಿಸಿರುತ್ತಾರೆ.

ಸದರಿ 9 ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರಾತಿ ಸಂಬಂಧ ಅಭಿಮತ ಪತ್ರಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈ ಹಿಂದೆ ಈ ಅಧಿಕಾರಿಗಳ ವಿರುದ್ಧ ಸಿ.ಸಿ.ಎ ಬಾಕಿ ಇದ್ದುದರಿಂದ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರು ಮಾಡಿರುವುದಿಲ್ಲ. ಪ್ರಸ್ತುತ ಈ ಅಧಿಕಾರಿಗಳಲ್ಲಿ 1) ಶ್ರೀ.ಎ.ಟಿ ಚಾಮರಾಜ್, 2) ಶ್ರೀ.ಎಂ.ಮಲ್ಲಣ್ಣ ಮತ್ತು 3) ಶ್ರೀ.ಹೆಚ್ ಸದಾಶಿವಮೂರ್ತಿ. ಈ ಮೂವರ ಮೇಲೆ ಶಿಸ್ತು ಕ್ರಮ ಬಾಕಿ ಇದ್ದು ಉಳಿದ 6 ಜನರ ಮೇಲಿನ ಆರೋಪ ಕೈ ಬಿಟ್ಟು ಆರೋಪ ಮುಕ್ತರನ್ನಾಗಿ ಮಾಡಿರುವುದರಿಂದ ಸದರಿ 6 ಜನ ಅಧಿಕಾರಿಗಳು ಆಯುಕ್ತರಿಗೆ ಮನವಿ ಸಲ್ಲಿಸಿ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರು ಮಾಡಲು ಕೋರಿರುತ್ತಾರೆ. ಮೇಲೆ ಓದಲಾದ ಆಯುಕ್ತರ ಪ್ರಸ್ತಾವನೆಯನ್ವಯ ಈ ಅಧಿಕಾರಿಗಳು ಒಂದೇ ವೃಂದದಲ್ಲಿ ನಿರಂತರವಾಗಿ 15 ವರ್ಷಗಳ ಸೇವೆ ಸಲ್ಲಿಸಿರುವುದರಿಂದ ಹಾಗೂ ಕೆಲವು ಅಧಿಕಾರಿಗಳಿಗೆ ಉಪ ನಿರ್ದೇಶಕರೆಂದು ಬಡ್ತಿ ಬಂದರೂ ಅವರು ಹಳೆಯ ವೇತನ ಶ್ರೇಣಿಯಲ್ಲಿಯೇ ಮುಂದುವರೆಯುವುದಾಗಿ ಅಭಿಮತ ಪತ್ರ ನೀಡಿರುವುದರಿಂದ ಸಂಬಂಧಿತ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರು ಮಾಡಬೇಕಾಗಿದ್ದು ಈ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ :ಎಫ್‌ಡಿ 25 ಎಸ್‌ಆರ್‌ಪಿ 91 ದಿನಾಂಕ : 01-02-1993 ನಲ್ಲಿ ಅವಕಾಶವಿರುವಂತೆ ಸದರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಖಾಯಂ ಪೂರ್ವ ಸೇವಾ ಅವಧಿ, ತೃಪ್ತಿಕರ ಎಂದು ಘೋಷಿಸಿರುವ ಬಗ್ಗೆ ಸರ್ಕಾರದ ಆದೇಶಗಳು, ಅಧಿಕಾರಿಗಳ 5 ವರ್ಷಗಳ ಕಾರ್ಯ ನಿರ್ವಹಣಾ ವರದಿಗಳು/ವಿಶೇಷ ಕಾರ್ಯನಿರ್ವಹಣಾ ವರದಿಗಳು ಹಾಗೂ ಇಲಾಖಾ ಪರೀಕ್ಷೆಗಳು ತೇರ್ಗಡೆ ಮಾಡಿರುವುದನ್ನು ಪರಿಶೀಲಿಸಿ ಸ್ವಯಂ ಚಾಲಿತ ವೇತನ ಬಡ್ತಿಯ ಎಲ್ಲಾ ಷರತ್ತುಗಳನ್ನು ಪೂರೈಸಿರುವುದರಿಂದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಡಿಪಿಐ 2007, ದಿನಾಂಕ: 19/05/2008**

23

ಮೇಲೆ ಪ್ರಸ್ತಾಪಿಸಿದ ಸಂದರ್ಭಗಳ ಹಿನ್ನಲೆಯಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದಕ್ಕೆ ಸೇರಿದ ಗ್ರೂಪ್-ಬಿ ಗುಂಪಿನ ಸಮನಾಂತರ ಹುದ್ದೆಯಲ್ಲಿ ಬಡ್ತಿಯಿಲ್ಲದೆ ಒಂದೇ ವೃಂದದಲ್ಲಿ ನಿರಂತರವಾಗಿ 15 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಹಾಗೂ ಕೆಲವು ಅಧಿಕಾರಿಗಳು ಉಪ ನಿರ್ದೇಶಕರೆಂದು ಬಡ್ತಿ ಹೊಂದಿದ್ದರೂ ಹಳೆಯ ವೇತನ ಶ್ರೇಣಿಯಲ್ಲಿ ಮುಂದುವರೆಯಲು ಅಭಿಮತ ಪತ್ರ ನೀಡಿರುವುದರಿಂದ ಪ್ರಸ್ತುತ **"ಅನುಬಂಧ"**ದಲ್ಲಿ ಸೂಚಿಸಿದ 6 ಜನ ಅಧಿಕಾರಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕ ಮತ್ತು ವೇತನ ಶ್ರೇಣಿಯಲ್ಲಿ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿಯನ್ನು ಮಂಜೂರು ಮಾಡಿ ಆದೇಶಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/5

(ಎಂ.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸೇವೆಗಳು-1,2)

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಗುಲ್ಬರ್ಗಾ
3. ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಕ್ಯಾಬಿನೆಟ್ ಸ... [illegible])
4. ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,
5. ಸಂಬಂಧಪಟ್ಟ ಅಧಿಕಾರಿಗಳಿಗೆ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮುಖಾಂತರ)
6. ಶಾಖಾ ರಕ್ಷಾ ಕಡತ / ಹೆಚ್ಚುವರಿ

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಅಧಿಕಾರಿಗಳಿಗೆ 15 ವರ್ಷಗಳ ವೇತನ ಬಡ್ತಿ ಕುರಿತು ಮಂಜೂರಾತಿ ಆದೇಶ ಸಂಖ್ಯೆ: ಇಡಿ 92 ಡಿಪಿಐ 2007, ದಿನಾಂಕ: 23-05-2008

## ಅನುಬಂಧ

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಸದರಿ ಅವಧಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸ್ಥಳ | ಗ್ರೂಪ್ 'ಬಿ' ಹುದ್ದೆಗೆ ಸೇರಿದ ದಿನಾಂಕ | 15 ವರ್ಷ ಪೂರ್ಣಗೊಂಡ ದಿನಾಂಕ | ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ | 15 ವರ್ಷಗಳ ಸ್ವ.ಚಾ.ಬಡ್ತಿಯಲ್ಲಿ ನಿಗಧಿ ಪಡಿಸಬೇಕಾದ ವೇತನ ಶ್ರೇಣಿ |
|---|---|---|---|---|---|
| 1. | ಶ್ರೀಮತಿ.ಯಶೋಧ ಬೋಪಣ್ಣ,ಹಿರಿಯ ಕಾರ್ಯಕ್ರಮಅಧಿಕಾರಿ, ಎಸ್.ಎಸ್.ಎ ಬೆಂಗಳೂರು | 19-10-1984 | 18-10-1999 | 6300-11840 | 7400-13120 |
| 2. | ಶ್ರೀ.ಪಿ.ಎಸ್. ಯರಗಲ್, ಉಪನ್ಯಾಸಕರು, ಸಿಟಿಇ ಜಮಖಂಡಿ | 05-11-1984 | 04-11-1999 | 6300-11840 | 7400-13120 |
| 3. | ಶ್ರೀ.ಎಸ್ ಜಯಕುಮಾರ್, ಬಿ.ಇ.ಓ,ಚಿಕ್ಕನಾಯಕನಹಳ್ಳಿ ತುಮಕೂರು ಜಿಲ್ಲೆ | 19-10-1984 | 18-10-1999 | 6300-11840 | 7400-13120 |
| 4. | ಶ್ರೀ.ಆರ್.ಸಿ.ಹಲಗತ್ತಿ, ಬಿ.ಇ.ಓ ಬೈಲಹೊಂಗಲ, ಬೆಳಗಾಂ ಜಿಲ್ಲೆ | 27-10-1984 | 26-10-1999 | 6300-11840 | 7400-13120 |
| 5. | ಶ್ರೀ.ಕೆ.ಜಿ.ಮಹದೇವಯ್ಯ, ಹಿಂದಿನಬಿ.ಇ.ಓ,ಬೇಲೂರು ಹಾಸನ ಜಿಲ್ಲೆ | 31-10-1984 | 30-10-1999 | 6300-11840 | 7400-13120 |
| 6. | ಶ್ರೀ.ಟಿ.ಸಿಚಂದ್ರಯ್ಯ,ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಬೆಂಗಳೂರು ಉತ್ತರ ಜಿಲ್ಲೆ | 15-10-1984 | 15-10-1999 | 6300-11840 | 7400-13120 |

(ಎಂ.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸೇವೆಗಳು-1,2)